ಅಸಹ್ಯದ ಬದುಕು ಬದುಕೋದಕ್ಕಿಂತ ಅವನು ಸತ್ತು ಹೋಗಿದ್ರೆ ಎಷ್ಟೋ ಚೆನ್ನಾಗಿರುತ್ತಿತ್ತು. ಅಲ್ಲಿ ಅವನು ಬದುಕುತ್ತಿರುವುದನ್ನು ನೋಡಿಯೇ ಅದನ್ನ ಅರಗಿಸಿಕೊಳ್ಳೋಕೆ ಆಗ್ತಾ ಇಲ್ಲ. ಇನ್ನು ಇಲ್ಲಿಗೆ ಬಂದು ನನ್ನ ಕಣ್ಮುಂದೆ ದಿನಾ ಅವನು ಹೆಣ್ಣಿನಂತೆ ಓಡಾಡುತ್ತಿದ್ದರೆ ನನ್ನಿಂದ ನೋಡೋಕೆ ಸಾಧ್ಯಾನಾ ಅಣ್ಣ? ಹೇಗೋ ಅಲ್ಲಿದ್ದಾನೆ, ಕಣ್ಮರೆಯಾಗಿ ಅಲ್ಲೇ ಇದ್ದುಬಿಡಲಿ ಬಿಡು, ಮತ್ತೆ ಈ ಊರಿಗೆ ಬಂದು ನನ್ನ ನೆಮ್ಮದಿ ಕಳೆಯೋದು ಬೇಡ' ಕಡ್ಡಿ ತುಂಡಾಗುವಂತೆ ಹೇಳಿಬಿಟ್ಟ ಮಾದೇವ. ತಮ್ಮನ ಮಾತಿಗೆ ದಂಗುಬಡಿದು ಹೋದ ಜಗದೀಶರಿಗೆ ಬಾಯಿ ಕಟ್ಟಿ ಹೋಯಿತು, ಹೆತ್ತ ಕರುಳಿಗಿಂತಲೂ ಊರವರ ಮುಂದೆ ಮಾನ ಮರ್ಯಾದೆ ಹೋಗುತ್ತದೆ ಎಂಬುದೇ ಮುಖ್ಯವೇ. ಅನ್ನುವವರು ಹೇಗಿದ್ದರೂ ಅನ್ನುತ್ತಾರೆ. ಈಗಲೂ ಅನ್ನುತ್ತಾರೆ. ಅನ್ನಲಿ. ತಲೆಕೆಡಿಸಿಕೊಳ್ಳದಿದ್ದರೆ ಆಯಿತು. ಎಷ್ಟು ದಿನ ಅನ್ನುತ್ತಾರೆ, ಎಷ್ಟು ದಿನ ಆಡಿಕೊಂಡು ನಗುತ್ತಾರೆ. ಸತ್ಯ ಒಪ್ಪಿಕೊಂಡ ಮೇಲೆ ಅವರೇ ಸರಿ ಹೋಗುತ್ತಾರೆ, ಸರಿಹೋಗದಿದ್ದರೂ ಚಿಂತೆ ಇಲ್ಲ. ನಮಗೆ ನಮ್ಮ ಮನೆಯ ಮಗುವಿನ ಭವಿಷ್ಯ ಮಾತ್ರ ಮುಖ್ಯ. ಇಷ್ಟೆಲ್ಲಾ ಆಸ್ತಿ ಅಂತಸ್ತು ಇದ್ದೂ ಈ ಮನೆಯ ಮಗು ತುತ್ತು ಅನ್ನಕ್ಕಾಗಿ ಅಲ್ಲೆಲ್ಲೋ ಕಷ್ಟ ಪಡುವುದು ಸರಿಯೇ, ಈ ಮನೆಯ ಮಕ್ಕಳೆಲ್ಲಾ ಖುಷಿಯಾಗಿ, ಸಂತೋಷದಿಂದ ಬದುಕುತ್ತಿರುವಾಗ ಆ ಮಗು ಏನು ಪಾಪ ಮಾಡಿತ್ತು? ನಾನು ಬದುಕಿರುವ ತನಕ ಆ ಮಗುವಿಗೆ ಅನ್ಯಾಯ ಆಗಲು ಬಿಡುವುದಿಲ್ಲ. ಇದಕ್ಕೆ ಅವನಪ್ಪನೇ ಅಲ್ಲ ಯಾರು ಅಡ್ಡಿ ಬಂದರೂ ಬಿಡುವುದಿಲ್ಲ. ನಾನು ಸಾಯುವಷ್ಟರಲ್ಲಿ ವೀರುಗೆ ಒಂದು ನೆಲೆ ಕಲ್ಪಿಸದೆ ಬಿಡುವುದಿಲ್ಲ. ಮನಸ್ಸಿನಲ್ಲಿಯೇ ದೃಢನಿರ್ಧಾರ ಮಾಡಿಕೊಂಡ ಮೇಲೆಯೇ ಅವರಿಗೆ ಸಮಾಧಾನವಾಗಿದ್ದು. ಇನ್ನು ಮಾತಿನಲ್ಲಿ ಹೇಳುವುದು ಬೇಡ. ಕೃತಿಯಲ್ಲಿ ತೋರಿಸಬೇಕು ಅಂತ ಮುಂದಿನ ಕಾರ್ಯದಲ್ಲಿ ಮಗ್ನರಾದರು. ಮಾದೇವನನ್ನು ಬಿಟ್ಟು ಮನೆಯ ಎಲ್ಲಾ ಹೆಣ್ಣು ಮಕ್ಕಳೊಂದಿಗೆ ಈ ವಿಚಾರವಾಗಿ ಚರ್ಚಿಸಿದರು, ವೀರೂ ಮನಸ್ಸನ್ನು ಒಲಿಸಿ ಇಲ್ಲಿಗೆ ಕರೆದುಕೊಂಡು ಬರುವುದು ಹೇಗೆ, ಅವನನ್ನು ಇಲ್ಲಿ ಹೇಗೆ ಇರಿಸಿಕೊಳ್ಳುವುದು, ಅವನು ಊರವರ ಮುಂದೆ ಅಪಮಾನಿತನಾಗಿ ಇರದಂತೆ ಹೇಗೆ ಊರವರ ಮನ ಒಲಿಸುವುದು, ಅವನು ಹೇಗೆ ಇದ್ದಾನೋ ಹಾಗೆ ಮನೆಯವರೆಲ್ಲ ಒಪ್ಪಿಕೊಳ್ಳುವಂತೆ, ಅದರಲ್ಲೂ ಮಾದೇವ ಒಪ್ಪಿಕೊಳ್ಳುವಂತೆ ಮಾಡುವುದರ ಬಗ್ಗೆ ಪ್ರತಿ ದಿನಾ ಫೋನಿನಲ್ಲಿಯೇ ಸುದೀರ್ಘ ಸಂವಾದ ನಡೆಸಿದರು, ಈ ವಿಷಯದಲ್ಲಿ ಮನೆಯ ಹೆಣ್ಣು ಮಕ್ಕಳ ಸಂಪೂರ್ಣ ಸಹಕಾರ ಇತ್ತು.

ವೀರೂ ಒಬ್ಬನೇ ಇಲ್ಲಿಗೆ ಬರಲು ಸಿದ್ಧವಿಲ್ಲ. ಅವನ ಸಂಗಡಿಗರನ್ನೂ ಇಲ್ಲಿಗೆ ಕರೆ ತರುವಂತಾದರೆ, ಅವರನ್ನು ಕರೆ ತಂದರೆ ಖಂಡಿತಾ ಅವರಿಗಾಗಿ ವೀರೂ ಇಲ್ಲಿಗೆ ಬರುತ್ತಾನೆ, ಇದೇ ಊರಿನಲ್ಲಿ ಉಳಿಯಲು ಒಪ್ಪಿಯೇ ಒಪ್ಪುತ್ತಾನೆ. ಅವನೊಬ್ಬನನ್ನೇ ಈ ಊರಿನವರು ನೋಡುವುದಕ್ಕಿಂತ ಅವನಂಥವರೇ ಅವನ ಜೊತೆ ಇದ್ದರೆ ಜನಗಳಿಗೂ ವಿಶೇಷ ಅನ್ನಿಸುವುದಿಲ್ಲ, ಮಾದುಗೂ ಮುಜುಗರವಾಗುವುದಿಲ್ಲ, ವೀರೂವಿಗೂ ಇರಿಸು ಮುರಿಸು ಆಗುವುದಿಲ್ಲ. ಅಲ್ಲಿ ಅವರು ಮಾಡುತ್ತಿರುವ ಗಾರ್ಮೆಂಟನ್ನು ಇಲ್ಲಿ ಪ್ರಾರಂಭಿಸುವುದು, ಅಲ್ಲಿ ಅವನಂಥವರನ್ನು ಮಾತ್ರ ಮೊದಲು ಕೆಲಸಕ್ಕೆ ತೆಗೆದುಕೊಳ್ಳುವುದು, ಮತ್ತೂ ಕೆಲಸಗಾರರು ಬೇಕಾದರೆ, ಬೇರೆಯವರು ಮುಜುಗರವಿಲ್ಲದೆ ಸ್ವಇಚ್ಛೆಯಿಂದ ಇಲ್ಲಿ ಕೆಲಸ ಮಾಡಲು ಮುಂದೆ ಬಂದರೆ ಅಂಥವರಿಗೂ ಅವಕಾಶ ಕೊಡುವುದು ಅಂತ ತೀರ್ಮಾನಿಸಿಕೊಂಡರು. ಅದಕ್ಕಾಗಿ ಸಿದ್ಧತೆ ಶುರು ಇಟ್ಟುಕೊಂಡರು. ಊರ ಹೊರಗೆ ಇರುವ ಜಾಗದಲ್ಲಿ ಒಂದು ಕಟ್ಟಡ ಕಟ್ಟಲು ಶುರು ಮಾಡಿದರು. ಗಾರ್ಮೆಂಟ್ಸ್ ಜೊತೆಗೆ ಮತ್ತೇನು ಮಾಡಬಹುದು ಅಂತ ಮಕ್ಕಳೊಂದಿಗೆ ಚರ್ಚಿಸಿದರು. ಮೊದಲು ಅವರೆಲ್ಲರನ್ನು ಇಲ್ಲಿಗೆ ಬರುವಂತೆ ಮಾಡುವುದು, ನಂತರ ಅವರ ಆಸಕ್ತಿ, ಕೌಶಲ್ಯಗಳಿಗೆ ತಕ್ಕಂತೆ ಅನುಕೂಲ ಮಾಡಿಕೊಡುವುದು ಅಂತ ತೀರ್ಮಾನಿಸಿಕೊಂಡರು. ಮನೆಯಲ್ಲಿ ಹಣವಿದ್ದಾಗ ಕೆಲಸಕ್ಕೆ ಅಡೆತಡೆಯೆಂಟಾಗುವುದೇ. ಕಟ್ಟಡ ಬೇಗ ಎದ್ದಿತು. ಕಟ್ಟಡದ ಹಿಂಭಾಗ ಪುಟ್ಟ ಪುಟ್ಟ ಮನೆಗಳನ್ನು ಕೂಡ ಕಟ್ಟಲಾಯಿತು. ಯಾವುದೇ ಸಂಕೋಚವಿಲ್ಲದೆ ಆ ಮನೆಗಳಲ್ಲಿ ವೀರೂವಿನ ಸಂಗಡಿಗರು ಉಳಿಯುವ ವ್ಯವಸ್ಥೆ ಮಾಡಲಾಗಿತ್ತು. ಇನ್ನುಳಿದಿರುವುದು ವೀರೂವನ್ನು ಮತ್ತು ಅವನ ಸ್ನೇಹಿತರನ್ನು ಮನವೊಲಿಸಿ ಕರೆ ತರುವುದಷ್ಟೇ ಬಾಕಿ. ಅದಕ್ಕಾಗಿ ತಮ್ಮ ಮನೆಯ ಮಕ್ಕಳೆಲ್ಲರನ್ನೂ ಕರೆದುಕೊಂಡು ಬೆಂಗಳೂರಿಗೆ ಹೊರಟರು.

ವರ್ಷಳಿಗೆ ಮನೆಯವರನ್ನು ಕಂಡು ಮಾತನಾಡಿದ ಮೇಲೆ ಅವರ ನೆನಪು ತೀವ್ರವಾಗಿ ಕಾಡುತ್ತಿತ್ತು. ಅಪ್ಪ, ಅಕ್ಕಂದಿರು ಅದಕ್ಕೂ ಹೆಚ್ಚಾಗಿ ದೊಡ್ಡಪ್ಪ ಹೆಚ್ಚಾಗಿ ಕಾಡುತ್ತಿದ್ದರು. ಎಲ್ಲರೂ ಇದ್ದೂ ಅವರ ಅಪಾರ ಪ್ರೀತಿ ಇದ್ದಾಗ್ಯೂ ಯಾರೂ ಇಲ್ಲದಂತೆ ಒಂಟಿಯಾಗಿ ಬದುಕುವುದು ತುಂಬಾ ಕಷ್ಟವೆನಿಸತೊಡಗಿತು. ತನಗಾಗಿ ಬಂದವರನ್ನು ಕಟುಕನಂತೆ ವಾಪಸ್ಸು ಕಳಿಸಿಬಿಟ್ಟೆನೇನೋ ಎನ್ನುವ ನೋವು ಕಾಡತೊಡಗಿತ್ತು. ತಿಂಗಳುಗಳು ಕಳೆದರೂ ಯಾರೊಬ್ಬರೂ ಮತ್ತೆ ತನ್ನನ್ನು ನೋಡಲು ಬಾರದಿರುವುದನ್ನು ಕಂಡು ನೋವಿನಿಂದ ಪರಿತಪಿಸುತ್ತಿದ್ದಳು. ಫೋನ್ ಮಾಡಬೇಕೆಂದು ಅದೆಷ್ಟು ಸಲ ಅಂದುಕೊಂಡರೂ ಬೇಡ ಮತ್ತೆ ತನ್ನವರ ವ್ಯಾಮೋಹದಲ್ಲಿ ಬೀಳುವುದು ಎಂದು ಮನಸ್ಸನ್ನು ಕಂಟ್ರೋಲ್ ಮಾಡಿಕೊಳ್ಳುತ್ತಿದ್ದಳು. ಅವಳ ನೋವು, ಸಂಕಟ, ತಳಮಳ ಜೊತೆಯಲ್ಲಿ ಇದ್ದವರಿಗೆ ಅರ್ಥವಾಗುತ್ತಿದ್ದರೂ ಅಸಹಾಯಕರಾಗಿದ್ದರು. ತಮ್ಮವರೊಂದಿಗೆ ಬಾಳುವ ಅದೃಷ್ಟ ತಮ್ಮಂಥವರಿಗೆ ಎಲ್ಲಿದೆ ಅಂತ ಅಂದುಕೊಂಡು ಸುಮ್ಮನಾಗಿಬಿಡುತ್ತಿದ್ದರು. ಆದರೆ ವರ್ಷಳಿಗೆ ಹಾಗೆ ಸುಮ್ಮನಿರಲು ಆಗುತ್ತಿರಲಿಲ್ಲ. ಅಕ್ಕಂದಿರು, ದೊಡ್ಡಪ್ಪ, ಅಪ್ಪ ಬಾರದಿದ್ದರೆ ಚೆನ್ನಾಗಿತ್ತು, ನಾನು ಸತ್ತು ಹೋಗಿದ್ದೇನೆ ಅಂತ ಅಂದುಕೊಂಡು ನನ್ನನ್ನು ಮರೆತುಬಿಟ್ಟಿದ್ದಾರೆ ಅಂತ ಎದೆ ಗಟ್ಟಿಮಾಡಿಕೊಂಡು ತನ್ನ ಪ್ರಪಂಚದಲ್ಲಿ ತಾನು ಮುಳುಗಿ ಹೋಗಿ ತನ್ನಂಥವರೊಂದಿಗೆ ಬದುಕುತ್ತಾ ಹೇಗೋ ಸುಮ್ಮನಿದ್ದು ಬಿಟ್ಟಿದ್ದೆ. ಆದರೆ ಈಗ ಅವರಾರೂ ತನ್ನನ್ನು ಮರೆತಿಲ್ಲ, ತನ್ನ ಈ ಸ್ಥಿತಿಗೆ ಅವರ ತಿರಸ್ಕಾರವಿಲ್ಲ, ಕೋಪವಿಲ್ಲ, ತಾತ್ಸಾರ ಇಲ್ಲ. ಮೊದಲಿನ ಪ್ರೀತಿಯೇ ತನ್ನ ಮೇಲೆ ಇದೆ ಅಂತ ಗೊತ್ತಾದ ಮೇಲೆ ಮನೆಯವರ ಮೇಲೆ ಮತ್ತಷ್ಟು ಪ್ರೀತಿ ಹೆಚ್ಚಾಗಿತ್ತು. ಹಿಂದಿನ ದಿನಗಳು ನೆನಪಾಗಿ, ಅಕ್ಕಂದಿರ ಪ್ರೀತಿ, ಅಪ್ಪ, ಅಮ್ಮನ ಪ್ರೀತಿ, ವಾತ್ಸಲ್ಯ, ದೊಡ್ಡಪ್ಪ, ದೊಡ್ಡಮ್ಮನ ಮಮತೆ ಇವೆಲ್ಲವೂ ನೆನಪಾಗಿ ಮನೆಯ ಸೆಳೆತ ಹೆಚ್ಚಾಗಿತ್ತು. ಆದರೆ ಅಲ್ಲಿ ಹೋಗಿ ತಾನು ಇರಲು ಸಾಧ್ಯವೇ. ಮುಂಚಿನಂತೆ ಬದುಕಲು ಆಗುತ್ತದೆಯೆ. ತನ್ನನ್ನು, ತನ್ನ ಈ ಅವತಾರವನ್ನು ತನ್ನೂರಿನವರು ಒಪ್ಪಿಯಾರೆ? ತಾನು ಹೋದರೂ ಅಲ್ಲಿನವರ ಕುಹಕ, ತಿರಸ್ಕಾರ, ಅವಹೇಳನ ತಾಳಿಕೊಳ್ಳಲು ಸಾಧ್ಯವೇ? ಇನ್ನು ಅಕ್ಕಂದಿರಿಗೆ ತನ್ನ ಮೇಲೆ ಪ್ರೀತಿ, ಮಮಕಾರ ಇದ್ದರೂ ಅವರ ಗಂಡಂದಿರ ಮನೆಯವರು ತನ್ನನ್ನು ಸ್ವೀಕರಿಸುವರೇ, ಸುಮ್ಮನೆ ಅಕ್ಕಂದಿರಿಗೂ ಧರ್ಮಸಂಕಟ, ಬೇಡ ಬೇಡ, ತಾನು ಮತ್ತೆ ಊರಿಗೆ ಹೋಗುವುದಾಗಲಿ, ಮತ್ತೆ ಅಲ್ಲಿನ ಸಂಬಂಧ ಬೆಳೆಸಿಕೊಳ್ಳುವುದಾಗಲಿ ಬೇಡವೇ ಬೇಡ. ಹೇಗೋ ತನ್ನ ಬದುಕು ಈ ಸ್ಥಿತಿ ತಲುಪಿಯಾಗಿದೆ. ನನ್ನ ಹಣೆಬರಹ ಹೀಗಿರುವಾಗ ಯಾರೇನು ಮಾಡಲು ಸಾಧ್ಯ? ಹೇಗೋ ಬದುಕಿ ಕೊನೆಗೆ ಈ ಲೋಕ ಬಿಟ್ಟು ಹೋಗಿಬಿಡಬೇಕು. ಉದಾಸೀನ ಭಾವದಿಂದಲೇ ದಿನದೂಡುತ್ತಿದ್ದಳು ವರ್ಷ.

ಅದೊಂದು ದಿನ ಮನೆಯವರೆಲ್ಲಾ ಅವಳಿರುವಲ್ಲಿಗೆ ಬಂದುಬಿಟ್ಟಾಗ ಖುಷಿಯಿಂದ ಕುಣಿದಾಡುವಂತೆ ಆಗಿತ್ತು ವರ್ಷಳಿಗೆ. ಹಾಗೆ ಬಂದವರು ತಮ್ಮೊಂದಿಗೆ ತನ್ನನ್ನು ಕರೆದೊಯ್ಯಲು ಬಂದಿರುವರೆಂದು ತಿಳಿದಾಗ ಕಂಗಾಲಾದಳು. ತಾನು ಯಾವುದನ್ನು ಆಗಬಾರದು ಅಂತ ಅಂದುಕೊಂಡಿದ್ದಳೊ ಅದು ಆಗುತ್ತಿರುವುದು ಕಂಡು ದ್ವಂದ್ವಕ್ಕೊಳಗಾದಳು. ದೊಡ್ಡಪ್ಪ ತಾನು ಮಾಡಿರುವ ಯೋಜನೆ ತಿಳಿಸಿ 'ನಿನ್ನವರೊಂದಿಗೆ ಬಂದುಬಿಡು ವೀರೂ. ಅಲ್ಲಿ ಎಲ್ಲಾ ವ್ಯವಸ್ಥೆ ಮಾಡಿ ಆಗಿದೆ. ಇಲ್ಲಿ ಅತಂತ್ರವಾಗಿ ಬದುಕುವ ಬದಲು ನೆಮ್ಮದಿಯಿಂದ ಇಲ್ಲಿನ ಕಾಯಕವನ್ನೇ ಅಲ್ಲಿ ದೊಡ್ಡ ಮಟ್ಟದಲ್ಲಿ ಮುಂದುವರಿಸಿ. ನಿಮಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಮಾಡಿದ್ದೇವೆ. ಒಟ್ಟಿನಲ್ಲಿ ನೀನು ನಮ್ಮ ಕಣ್ಣ ಮುಂದೆ ಇರಬೇಕು. ನೀನು ಹೆಣ್ಣಿನಂತೆ ಬಟ್ಟೆ ಹಾಕಿಕೊಂಡು ವರ್ಷ ಆಗಿಯಾದರೂ ಇರು, ವೀರೂವಾಗಿಯಾದರೂ ಇರು. ನಮಗೆ ಮಾತ್ರ ನೀನು ವೀರೂವೇ. ನಿನ್ನ ಅಕ್ಕಂದಿರು ಒಪ್ಪಿದ್ದಾರೆ, ಅವರ ಗಂಡನ ಮನೆಯವರು ನಿಧಾನವಾಗಿ ನಿನ್ನ ಒಪ್ಪಿಕೊಳ್ಳುತ್ತಾರೆ. ಇನ್ನು ಊರಿನವರು, ನೆಂಟರಿಷ್ಟರು ಕೆಲದಿನ ಆಡಿಕೊಂಡು ನಕ್ಕರೂ, ಕಾಲಕಳೆದಂತೆ ಅವರೂ ಸುಮ್ಮನಾಗುತ್ತಾರೆ. ನೀನು ಅಂಜದೆ ಅಳುಕದೆ ಬರಬೇಕು ಅಷ್ಟೆ, ನೀನು ಬಾರದೆ ನಾವು ಇಲ್ಲಿಂದ ಹೊರಡುವುದಿಲ್ಲ' ಅಂತ ಪಟ್ಟು ಹಿಡಿದು ಕುಳಿತುಬಿಟ್ಟಾಗ ವರ್ಷಗೆ ಬೇರೆ ದಾರಿಯೇ ಇರಲಿಲ್ಲ.

(ಸಶೇಷ)